# ನಮ್ಮ ಕಾಲಕ್ಕೆ ಬೇಕಾದ ಗಾಂಧಿ

ಆದರ್ಶ ರಾಜಕಾರಣಿ ಗಾಂಧೀಜಿ ಉತ್ತಮ ಬರಹಗಾರರೂ ಆಗಿದ್ದರು. ಯಾವ ಗೊಂದಲಕ್ಕೂ ಎಡೆಕೊಡದಂತೆ ತಮ್ಮ ಚಿಂತನೆಗಳನ್ನು ಅವರು ದಾಖಲಿಸಿದ್ದಾರೆ. ಅವರಂತೆಯೇ ಅವರ ಬರಹಗಳೂ ಸರಳವಾಗಿವೆ, ಮನಕ್ಕೆ ನಾಟುವಂತಿವೆ. ಸ್ವಾತಂತ್ರ್ಯ ಚಳವಳಿಯ ಕಾಲಕ್ಕೆ ಅವರ ಬದುಕೇ ದೇಶದ ಜನತೆಗೆ ಪಾಠಶಾಲೆಯಾಗಿತ್ತು, ಸಂದೇಶವಾಗಿತ್ತು. ಆಗ ಗಾಂಧೀಜಿಯ ಜೀವನಕ್ರಮ ಮತ್ತು ಚಿಂತನೆಗಳೊಂದಿಗೆ ಜನರು ಗುರುತಿಸಿಕೊಳ್ಳಲು ಬಯಸುತ್ತಿದ್ದರು. ಹಾಗೆ ಗುರುತಿಸಿಕೊಳ್ಳುವುದು ನಾಡಿನ ಜನರಿಗೆ ಹೆಮ್ಮೆಯ ವಿಚಾರವಾಗಿತ್ತು. ಬದುಕು–ಭಾವವನ್ನು ಆವರಿಸಿದ ಅಂತಹ ಗಾಂಧೀಜಿ ಈಗ ನಮ್ಮಲ್ಲೆಷ್ಟು ಉಳಿದುಕೊಂಡಿದ್ದಾರೆ ಎಂದು ನೋಡಿಕೊಂಡರೆ ವಿಷಾದ ಸುಳಿಯದೇ ಇರದು. ನೋಟು, ಅಂಚೆಚೀಟಿಯ ಮೇಲೆ, ರಸ್ತೆ, ಬಡಾವಣೆಯ ಹೆಸರಾಗಿ ಉಳಿದುಕೊಂಡಿರುವ ಬಾಪು ಯಾವತ್ತೂ ನಮ್ಮನ್ನು ಬಿಟ್ಟಿರಲಿಲ್ಲ. ಬದಲಾಗಿ ನಾವೇ ಅವರನ್ನು ಕೆಲಸಕ್ಕೆ ಬಾರದ ಮುದುಕ ಎಂದು ನಿರ್ಲಕ್ಷಿಸಿದೆವು. ಗಾಂಧೀ ಚಿಂತನೆಗಳಿಂದ ನಾವು ದೂರವಾಗಿದ್ದರ ಜೊತೆಗೆ ಅವರ ಚಿಂತನೆಗಳಿಂದ ಜನರನ್ನು ದೂರವಿಡಲಾಗಿದೆ ಎಂಬುದೂ ಅಷ್ಟೇ ನಿಜ. ಜಗತ್ತಿನ ಹಲವರನ್ನು ಪ್ರಭಾವಿಸಿದ ಬಾಪುವಿನ ಚಿಂತನೆಗಳನ್ನು ಈಗ ಮಕ್ಕಳ, ಯುವಜನರ ಕಣ್ಣು ಕಿವಿಗಳಿಗೆ ಬೀಳದಂತೆ ಮಾಡಲಾಗಿದೆ. ಅವರ ಚಿಂತನೆ ಮತ್ತು ದರ್ಶನದೊಂದಿಗೆ ಬೆಳೆಯುವ ಅವಕಾಶ ನಮ್ಮ ದೇಶದ ಮಕ್ಕಳಿಗಿಲ್ಲ. ಇದರ ಹಿಂದೆ ವೇಗವಾಗಿ ಬದಲಾಗುತ್ತಿರುವ ನಮ್ಮ ಬದುಕು, ರಾಜಕಾರಣ, ಆರ್ಥಿಕತೆ ಇವೆಲ್ಲವೂ ಇವೆ.



ಕಲೆ: ಪಿ.ವಿ. ರಾಮಮೂರ್ತಿ

ಪ್ರತಿ ಕಾಲವೂ ತನ್ನನ್ನು ಸುತ್ತುವರೆದಿರುವ ಕೇಡುಗಳ ವಿರುದ್ಧ ಸೆಣೆಸುತ್ತಲೇ ಇರುತ್ತದೆ. ಹಾಗೆ ಎದುರಿಸುವಾಗ ನೆರವಾಗಬಹುದಾದ ಮೂರು ಚಿಂತನೆಗಳೆಂದರೆ ಗಾಂಧಿ, ಅಂಬೇಡ್ಕರ್ ಮತ್ತು ಲೋಹಿಯಾ ಅವರದಾಗಿವೆ. ಈ ಚಿಂತಕರು ಭಾರತವನ್ನು ನೋಡುವ ಕಣ್ಣುಗಳನ್ನು, ಅರಿಯುವ ದೃಷ್ಟಿಕೋನವನ್ನು, ಅದನ್ನು ಕಟ್ಟಬಲ್ಲ, ಮುನ್ನಡೆಸಬಲ್ಲ ನೈತಿಕಸ್ಥೈರ್ಯವನ್ನು ಕೊಡಬಲ್ಲರು. ಗಾಂಧೀಜಿಯನ್ನು ಮರೆತಿರುವುದು ನಮ್ಮ ಹಲವು ಸಮಸ್ಯೆಗಳಿಗೆ ಕಾರಣವಾಗಿದೆ. ಎಲ್ಲ ಮುಖ್ಯ ಚಿಂತನೆಗಳನ್ನು ಕಾಲಕ್ಕೆ ತಕ್ಕಂತೆ ಮಾರ್ಪಡಿಸಿಕೊಳ್ಳಬೇಕಾಗುತ್ತದೆ. ಈ ಕಾಲದ ಅಗತ್ಯಗಳನ್ನು ನೋಡಿಕೊಂಡು ಬಾಪುವಿನೊಂದಿಗೆ ಹೆಜ್ಜೆಹಾಕಿದರೆ ನಮಗೆ ಉಳಿಗಾಲವಿದೆ.

ಯಾವುದೇ ದೊಡ್ಡ, ಜೀವಪರ ಚಿಂತನೆಯನ್ನು ಹತ್ತಿಕ್ಕುವುದು, ಮರೆಗೆ ಸರಿಸುವುದು ಅಸಾಧ್ಯ. ಅದು ಬೇರೊಂದು ರೂಪದಲ್ಲಿ ಹುಟ್ಟುತ್ತ, ನಮ್ಮತ್ತ ಮರಳುತ್ತ ಇರುತ್ತದೆ. ಗಾಂಧೀ ಚಿಂತನೆಗಳಿಗೆ ಹಾಗೆ ಕಾಲದ ಬೆಂಕಿಯಲ್ಲಿ ಸುಟ್ಟು ಅಪರಂಜಿಯಾಗುವ, ಯಾವ ಕಾಲಕ್ಕೆ ಬೇಕಾದರೂ ಹೊಂದಿಕೊಳ್ಳುವ, ಬೆಳೆಯುವ ಗುಣವಿದೆ. ನಮ್ಮ ಕ್ರಿಯೆ, ಮಾತು, ಬದುಕಿನ ಹಲವು ಸ್ತರಗಳಲ್ಲಿ ಬೆರೆತು ಹೋಗಿರುವ ಗಾಂಧೀಜಿಯನ್ನು ನಮ್ಮ ಬದುಕು, ಭವಿಷ್ಯಕ್ಕಾಗಿ ಈಗ ಮತ್ತೆ ನವೀಕರಿಸಿಕೊಳ್ಳಬೇಕಿದೆ. ಹಾಗೆ ನವೀಕರಿಸಿಕೊಳ್ಳುವುದು ನಮ್ಮನ್ನು ನಾವು ಜೀವಂತಗೊಳಿಸಿಕೊಳ್ಳುವ, ರಕ್ಷಿಸಿಕೊಳ್ಳುವ ತುಂಬ ಹತ್ತಿರದ ವಿಧಾನ ಕೂಡ. ಈ ದಿಸೆಯಲ್ಲಿ ಗಾಂಧೀ ಚಿಂತನೆಗಳ ಆಯ್ದ ಭಾಗಗಳ ಅನುವಾದದ ಗುಚ್ಛ ‘ಎಲ್ಲ ಕಾಲಕ್ಕೂ ಸಲ್ಲುವ ಗಾಂಧಿ’ ಮತ್ತು ವಿಶೇಷ ಪ್ರಬಂಧ ‘ಮಹಾತ್ಮ ಗಾಂಧಿ: ನಿರಂತರ ರಚನೆಯಾಗುತ್ತಿರುವ ಅಪೂರ್ಣ ಚಿತ್ರ’ವನ್ನು ಈ ಸಂಚಿಕೆಯಲ್ಲಿ ಕೊಡಲಾಗಿದೆ.

**ಸಂದೀಪ ನಾಯಕ**